# ಕಲೆ ಆತ್ಮತೃಪ್ತಿಗೆ ವೇದಿಕೆ

## ದಿವ್ಯಶ್ರೀ

ಕಲರ್ಸ್ ಕನ್ನಡದ
'ದಾಸ ಪುರಂದರ'ದ ರುಕ್ಮಿಣಿ



◆ **ಸಾಮಾಜಿಕ ಕಥೆ ಮತ್ತು ಪುರಾಣ ರೂಪದ ಐತಿಹಾಸಿಕ ಕಥೆಯ ಸವಾಲು ಹೇಗಿರುತ್ತವೆ?**

ನಟನೆಯ ಮೂಲಕ ನಾವಲ್ಲದ ಮತ್ತೊಂದು ವ್ಯಕ್ತಿತ್ವ ನಾವು ಕಟ್ಟಬೇಕು. ವಿಷಯ ಸಾಮಾಜಿಕ–ಆಧ್ಯಾತ್ಮಿಕ ಯಾವುದೇ ಆಗಿದ್ದರೂ ಅದರದ್ದೇ ಆದ ಸವಾಲುಗಳು ಇರುತ್ತವೆ. ಪ್ರತಿ ಪಾತ್ರವೂ ಕೂಡ ನಟರಿಗೆ ವಿಭಿನ್ನವೇ ಆಗಿರುತ್ತದೆ. ಒಂದರಲ್ಲಿ ಕಿವುಡಿ ಪಾತ್ರ ಮಾಡಿದ್ದೆ, ಮತ್ತೊಂದರಲ್ಲಿ ತುಂಟಿಯ ಪಾತ್ರ. ಈಗ ಮುಗ್ಧ ಹುಡುಗಿಯಾಗಿದ್ದೇನೆ. ಯಾವುದೇ ಪಾತ್ರ ಆಗಿದ್ದರೂ ತಾನು ನಿರ್ವಹಿಸುವ ಪಾತ್ರದ ಬಗ್ಗೆ ನಟರಿಗೆ ಕುತೂಹಲ ಮತ್ತು ಭಾವುಕತೆ ಇರುತ್ತದೆ. ಐತಿಹಾಸಿಕ–ಪೌರಾಣಿಕ ಸಂದರ್ಭವನ್ನು ತೆಗೆದುಕೊಂಡರೆ ಪಾತ್ರಕ್ಕೆ ಸಿದ್ಧತೆ, ಡ್ರೆಸ್, ಮೇಕಪ್, ಭಾಷೆ ಶೈಲಿಯಲ್ಲಿ ಬೇರೆ ಧಾರಾವಾಹಿಗಳಿಗಿಂತ ಭಿನ್ನವಾಗಿರುತ್ತದೆ. ಇದರಲ್ಲಿ ವೈಭವ ಹೆಚ್ಚು ಮೆರೆಯುತ್ತದೆ. ಇಂತಹ ಪಾತ್ರಗಳಿಗೆ ಶ್ರಮ ಹೆಚ್ಚು ಬೇಕಾಗುತ್ತದೆ, ಸೂಕ್ಷ್ಮತೆಗೆ ಒತ್ತುಕೊಡಬೇಕಾಗುತ್ತದೆ.

◆ **ಡ್ಯಾನ್ಸರ್‌ಗೆ ಅಭಿನಯ ವೃತ್ತಿಯಾಗಿದ್ದು ಹೇಗೆ?**

ಭರತನಾಟ್ಯದಲ್ಲಿ ಎಂಎ ಮಾಡಿದ್ದೇನೆ. ಮೊದಲು ಡಾನ್ಸ್ ಮೂಲಕವೇ ಅಭಿನಯವನ್ನು ತೋರಿಸುತ್ತಿದ್ದೆ. ನನ್ನ ಡಾನ್ಸ್ ಫ್ರೆಂಡ್ ಒಬ್ಬರು ಫೇಸ್‌ಬುಕ್‌ನಲ್ಲಿ ಫೋಟೊ ನೋಡಿ ಪಾತ್ರ ಒಂದಕ್ಕೆ ಡ್ಯಾನ್ಸರ್ ಬೇಕಿತ್ತು ಎಂದು ಆಡಿಷನ್‌ಗೆ ಕರೆದರು. ನಮ್ಮ ತಂದೆ–ತಾಯಿ ಆಡಿಷನ್‌ಗೆ ಕರೆದುಕೊಂಡು ಹೋದರು. ಹಾಗಾಗಿ ನಟನಾ ಕ್ಷೇತ್ರಕ್ಕೆ ಬಂದೆ. ಇಲ್ಲದಿದ್ದರೆ ಅಭಿನಯದಿಂದ ನಾನೂ ದೂರವೇ ಉಳಿಯುತ್ತಿದ್ದೆ. ನಟನೆಯ ಮೂಲತತ್ವ ಗೊತ್ತಿರಲಿಲ್ಲ. ಆಗ ಆಕ್ಷನ್–ಕಟ್ ಅಂದ್ರೆ ಏನು ಅಂತಾನೂ ಗೊತ್ತಿರಲಿಲ್ಲ. ಈಗ ಸಾಕಷ್ಟು ಕಲಿತಿದ್ದೇನೆ.

◆ **ಶಾಸ್ತ್ರೀಯ ಕಲಾವಿದೆ ಒಬ್ಬರು ಜನಪ್ರಿಯ ಕಲಾಮಾಧ್ಯಮದಲ್ಲಿ ಸಾಗುವಾಗ ಏನು ಅನ್ನಿಸಿತು?**

ನಾನು ಡಾನ್ಸ್ ಮಾಡ್ತಾ ಇದ್ದಿದ್ದು ನನ್ನ ಆತ್ಮತೃಪ್ತಿಗೆ. ನಟನೆಯನ್ನೂ ಕೂಡ ಅದೇ ಕಾರಣಕ್ಕೆ ಮಾಡುತ್ತಿದ್ದೇನೆ. ಹಾಗಾಗಿ ನನಗೆ ಅದು ಅಂತಹ ಭಿನ್ನ ಎಂದು ಅನ್ನಿಸುವುದಿಲ್ಲ. ನನ್ನ ನಟನೆಯಿಂದ ನನಗೆ ಖುಷಿ ಆದರೆ ಅಷ್ಟೇ ಸಾಕು. ಜನರಲ್ಲಿ ಕೆಲವೊಂದು ನಂಬಿಕೆ ಇದೆ. ಅದೇನೆಂದರೆ ಕೆಲವರಿಗೆ ಸದ್ಗುಣಗಳು, ಸದಾಚಾರದಿಂದ ದೇವರ ದರ್ಶನ ಆಗುತ್ತದೆ. ಇನ್ನೂ ಕೆಲವರು ಡಾನ್ಸ್– ಸಂಗೀತದಂತಹ ಕಲೆಯಿಂದ ಅದನ್ನು ಸಾಧಿಸುತ್ತಾರೆ ಎಂದು ಹೇಳುತ್ತಾರೆ. ನನಗೆ ಡಾನ್ಸ್ ಇರಬಹುದು ಇಲ್ಲವೇ ನಾನು ಮಾಡುವ ಯಾವುದೇ ಕೆಲಸ ದೇವರ ಸಮಾನ ಎಂದು ಅನ್ನಿಸುತ್ತದೆ. ನನ್ನ ಕೆಲಸದ ಮೂಲಕವೇ ದೇವರಿಗೆ ಹತ್ತಿರವಾಗುತ್ತೇನೆ. ನನ್ನ ಪಾತ್ರಕ್ಕೆ ನಾನು ನ್ಯಾಯ ನೀಡುವುದರಿಂದ ನನಗೆ ಖುಷಿ ಸಿಗುತ್ತದೆ.

◆ **ಅಭಿನಯಕ್ಕೆ ಬಂದಾಗ ಒಂದು ಪಾತ್ರವನ್ನು ಆಯ್ಕೆ ಮಾಡಿಕೊಳ್ಳಲು ಕಾರಣ ಇರುತ್ತಾ?**

ಮೂಲತಃ ಧಾರಾವಾಹಿಗಳಲ್ಲಿ ಅಷ್ಟು ಅವಕಾಶಗಳು ಇಲ್ಲ ಎಂದು ಅನಿಸುತ್ತದೆ. ನನಗೆ ಸಿಕ್ಕಿರುವ ಅವಕಾಶಗಳ ಹಿನ್ನೆಲೆಯಲ್ಲಿ ಹೇಳುತ್ತೇನೆ. ನನಗೆ ಸಿನಿಮಾದ ವಿಷಯ ಗೊತ್ತಿಲ್ಲ. ಟೀವಿಯಲ್ಲಿ ಲುಕ್ ಮೇಲೆ ಹೋಗುತ್ತಾರೆ. ನಿನ್ನ ಲುಕ್‌ಗೆ ಇದು ಸರಿಹೋಗುತ್ತದೆ ಎಂದು ಪಾತ್ರ ನೀಡುವುದೂ ಇದೆ. ನಾನೂ ಹುಡುಗಾಟದ ಹುಡುಗಿಯಿಂದ ಅನೇಕ ಪಾತ್ರಗಳನ್ನು ಮಾಡಿದ್ದೇನೆ. ನನ್ನ ಆಯ್ಕೆಗೆ ಕಾರಣ ಹೇಳುವುದಾದರೆ, ನಾನು ಕೇಳಿದ ಪಾತ್ರ ಮನಸಿಗೆ ನಾಟಬೇಕು. 'ದಾಸ ಪುರಂದರ'ದಲ್ಲಿ ರುಕ್ಮಿಣಿ ಪಾತ್ರ ಮಾಡುತ್ತಿದ್ದೇನೆ. ಇದರ ಜೊತೆ ಪದ್ಮಾಕ್ಕೂ ಆಡಿಷನ್ ನೀಡಿದ್ದೆ. ನಮ್ಮ ನಿರ್ಮಾಪಕರಿಗೆ ಪದ್ಮಾ ಪಾತ್ರವನ್ನು ಮಾಡಿಸುವ ಬಯಕೆ ಇತ್ತು. ನನಗೆ ರುಕ್ಮಿಣಿ ಪಾತ್ರ ತುಂಬ ಇಷ್ಟ ಆಗಿತ್ತು. ನನ್ನ ಅಮ್ಮನ ಹತ್ತಿರ ರುಕ್ಮಿಣಿ ಪಾತ್ರವೇ ಮಾಡಬೇಕು ಎಂದಿದ್ದೆ. ಅದೇ ಸಿಗಬೇಕು ಎಂದು ಜಪ ಮಾಡಿದ್ದೆ. ಅದೃಷ್ಟಕ್ಕೆ ಅದೇ ಸಿಕ್ಕಿದೆ. ರುಕ್ಮಿಣಿ ಪಾತ್ರ ತುಂಬ ವಾಸ್ತವ ಅನ್ನಿಸುತ್ತದೆ. ಪ್ರತಿ ಮಹಿಳೆಯೂ ತನ್ನ ಜೀವನದಲ್ಲಿ ಇದನ್ನು ಅನುಭವಿಸಿರುತ್ತಾರೆ. ಯಾವುದೇ ಒಂದು ರೀತಿಯಲ್ಲಿ ಇದು ಸ್ಪರ್ಶಿಸಿರುತ್ತದೆ. ಹೀಗಿರುವಾಗ ಈ ಪಾತ್ರ ಎಲ್ಲರ ಮನಸ್ಸನ್ನು ಮುಟ್ಟುತ್ತದೆ ಎನ್ನುವುದು ನನ್ನ ಭಾವನೆ.

◆ **ನಿಮ್ಮ ಪರಿಚಯವನ್ನು ಹೇಳಬಹುದಾ?**

ಮೂಲತಃ ಡ್ಯಾನ್ಸರ್, ಬಿಕಾಂ ನಂತರ ಭರತನಾಟ್ಯದಲ್ಲಿ ವಿದ್ವತ್ ಮಾಡುವ ಬದಲು, ಅದರಲ್ಲೇ ಎಂ.ಎ. ಮಾಡಿದೆ. ಒಬ್ಬ ಅಕ್ಕ ಒಬ್ಬ ತಂಗಿ ಇದ್ದಾರೆ. ಮದುವೆ ಆಗಿ 9 ವರ್ಷ ಆಯ್ತು. ನನ್ನ ಪತಿ ಸಾಫ್ಟ್‌ವೇರ್ ಎಂಜಿನಿಯರ್, ರಂಗಭೂಮಿ ಅವರ ಪ್ಯಾಶನ್. ನಾವಿಬ್ಬರೂ ಇಷ್ಟಪಟ್ಟು ಮದುವೆ ಆಗಿದ್ದು, ಅವರು ಚೆನ್ನಾಗಿ ಅರ್ಥಮಾಡಿಕೊಳ್ಳುತ್ತಾರೆ. ನಾನು ತಾಯಿಯಾದ ನಂತರ ಸ್ವಲ್ಪ ದಿನ ನಟನೆಯಿಂದ ದೂರ ಇದ್ದೆ. ಮತ್ತೆ ಮರಳಿ ಬರಬೇಕು ಎನ್ನುವ ಒತ್ತಡ ಮನಸ್ಸಿನಲ್ಲಿ ಕೊರೆಯುತ್ತಿತ್ತು. ಆಗ ನನ್ನ ಪತಿ ಮತ್ತು ಪೋಷಕರು ಪ್ರೋತ್ಸಾಹಿಸಿ ಮತ್ತೆ ಅಭಿನಯವನ್ನು ಮಾಡಿಸುತ್ತಿದ್ದಾರೆ.

◆ **ಬದುಕಿನಲ್ಲಿ ಎದುರಾದ ಅಚ್ಚರಿಯ ಕ್ಷಣ.**

ಗೊತ್ತಿಲ್ಲದೆ ಇರುವ ಅನೇಕರು ನನ್ನನ್ನು ಗುರುತಿಸುತ್ತಾರೆ. ಕೆಲವರು ನನ್ನ ಬಗ್ಗೆ ಮಾತನಾಡುತ್ತಿರುತ್ತಾರೆ. ಅಂತಹ ಹಲವು ಅನುಭವ ನನಗೆ ಆಗಿವೆ. ಯಾರೂ ನನ್ನ ನಿಜವಾದ ಹೆಸರನ್ನು ಕರೆಯುವುದಿಲ್ಲ. ಇದಕ್ಕಿಂತ ಮುಂಚೆ ಏಳು ಧಾರಾವಾಹಿಗಳಲ್ಲಿ ನಾಯಕಿಯಾಗಿ ನಟಿಸಿದ್ದೇನೆ. ಆ ಏಳು ಪಾತ್ರಗಳ ಹೆಸರಿನಲ್ಲಿ ಜನ ನನ್ನನ್ನು ಗುರುತಿಸುತ್ತಾರೆ. ಆ ಜನಪ್ರಿಯತೆ ತಲೆಗೆ ಬರಬಾರದು. ಅದು ಬಂದರೆ ನಮ್ಮಲ್ಲಿ ಅಹಂ ಬೆಳೆಯುತ್ತದೆ. ನಟನಾ ಕ್ಷೇತ್ರಕ್ಕೆ ಅದು ಪೆಟ್ಟು ಕೊಡುತ್ತದೆ. ವೃತ್ತಿ ಜೀವನ ಮತ್ತು ಖಾಸಗಿ ಬದುಕನ್ನು ಸಮತೋಲನದಲ್ಲಿ ನಡೆಸಿಕೊಂಡು ಹೋಗಬೇಕು ಎಂದು ನನಗೆ ಅನ್ನಿಸುತ್ತದೆ.

■ **ರಾಘವೇಂದ್ರ ಕೆ.**